**<u>02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ ,</u>**

**<u>ಚನ್ನಗಿರಿ .</u>**

**ಅಸಲು ದಾವಾ ಸಂಖ್ಯೆಃ 316/2025**

**ಹೆಸರುಃ ರಂಗನಾಥ ಎಸ್**

**ತಂದೆಯ ಹೆಸರುಃ ಶಿವಪ್ಪ** **ಪಿ.ಡಬ್ಲ್ಯೂಃ 2**

**ವಯಸ್ಸುಃ 32 ವರ್ಷ**

**ಉದ್ಯೋಗಃ ಸರ್ಕಾರಿ ಪರವಾನಿಗೆ ಸರ್ವೆಯರ್, ಚನ್ನಗಿರಿ ,**

**ವಾಸಸ್ಥಳಃ ದೇವರಹಳ್ಳಿ ಗ್ರಾಮ. ಚನ್ನಗಿರಿ ತಾಃ**

**ಸಾಕ್ಷಿಗೆ ದಿನಾಂಕಃ 30-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಆರ್ ವಕೀಲರಿಂದಃ</u>**

ನಾನು 2024 ರಿಂದ ಇಲ್ಲಿಯವರೆಗೆ ಪರವಾನಿಗೆ ಭೂಮಾಪಕನಾಗಿ ಚನ್ನಗಿರಿಯ ತಾಲ್ಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

ಸರ್ವೆ ನಂ 124/4ರ ಹದ್ದುಬಸ್ತು ಸರ್ವೆಗಾಗಿ ದಾಖಲಿಸಿದ ಅರ್ಜಿ ನನಗೆ 02-12-2024 ರಲ್ಲಿ ಹಂಚಿಕೆಯಾಗಿರುತ್ತದೆ. ದಿಃ 26-12-2024 ರಂದು ಸರ್ವೆ ನಂ 124/4ರ ಆಜುಬಾಜುದಾರರಿಗೆ ಮತ್ತು ಆರ್ಜಿದಾರರಿಗೆ ನೋಟಿಸನ್ನು ಜಾರಿ ಮಾಡಿ ದಿಃ 26-12-2024 ರಂದು ಅಳತೆಗಾಗಿ ಹೋಗಿರುತ್ತೇನೆ. ಸಾಕ್ಷಿ ಕಡತದಲ್ಲಿನ ಸದರಿ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನಾನು ಮಹಜರು ಕಾರ್ಯವನ್ನು ನಡೆಸಿರುತ್ತೇನೆ. ಸರ್ವೆ ನಂ 124/4ರ ಮೂಲ ದಾಖಲೆ ಮತ್ತು ಹಿಸ್ಸಾ ಟಿಪ್ಪಣಿಯನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅಳತೆ ಮಾಡಿ ಸದರಿ ಸರ್ವೆ ನಂಬರಿನ ಗಡಿಗಳನ್ನು ಗುರುತಿಸಿಕೊಂಡಿರುತ್ತೇನೆ. ನಂತರ ಬಾಂಡ್ ಗಲ್ಲುಗಳನ್ನು ಹಾಕಿಸಿರುತ್ತೇನೆ. ಸ್ಥಳದಲ್ಲಿ ಹೇಳಿಕೆಯನ್ನು ಪಡೆದು ಅದಕ್ಕೆ ಅರ್ಜಿದಾರರಾದ ಗಿರೀಶ ಮತ್ತು ಬಾಜುದಾರರಾದ

ಸಂತೋಷನ ಪರವಾಗಿ ಆತನ ತಂದೆಯ ಸಹಿಯನ್ನು ಪಡೆದಿರುತ್ತೇನೆ. ನಂತರ ಗ್ರಾಮಸ್ಥರ ಸಹಿಯನ್ನು ಪಡೆದಿರುತ್ತೇನೆ. ನಂತರ ಸ್ಥಳದಲ್ಲಿ ಹದ್ದುಬಸ್ತು ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ಮಹಜರು ಮತ್ತು ಹದ್ದುಬಸ್ತು ನಕ್ಷೆಗೆ ನಾನು ಸಹ ಸಹಿ ಮಾಡಿರುತ್ತೇನೆ.

ಮಹಜರು ಮತ್ತು ಹದ್ದುಬಸ್ತು ನಕ್ಷೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-7 ಮತ್ತು 8 ಎಂದು ಗುರುತಿಸಲಾಗಿದ್ದು ಅವುಗಳಲ್ಲಿನ ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿಪಿ-7(ಎ) ಮತ್ತು 8(ಎ) ಎಂದು ಗುರುತಿಸಲಾಯಿತು.

ಸದರಿ ನಕ್ಷೆಯಲ್ಲಿ ಸದರಿ ಅಳತೆ ಕಾರ್ಯದ ಸಮಯಕ್ಕೆ ಸರ್ವೆ ನಂ 124/5ರ ಬಾಜುದಾರರು ದಕ್ಷಿಣ ದಿಕ್ಕಿನ 7ವರೆ ಗುಂಟೆ ಜಮೀನನ್ನು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ಅದನ್ನು ನನ್ನ ನಕಾಶೆಯಲ್ಲಿ ಹಸಿರು ಬಣ್ಣದಿಂದ ತೋರಿಸಿರುತ್ತೇನೆ. ನಂತರ ಸದರಿ ಕೈಗೊಂಡ ಹದ್ದುಬಸ್ತು ಕಾರ್ಯದ ದಾಖಲೆಗಳನ್ನು ಅಫ್ ಲೋಡ್ ಮಾಡಿದ ತರುವಾಯ ಕಚೇರಿಗೆ ಹದ್ದುಬಸ್ತಿನ ಒತ್ತುವರಿ ನಕ್ಷೆಯೊಂದಿಗೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

(ಪ್ರತಿವಾದಿ ಏಕತರ್ಫಿ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**